ಜೂನ್ 2002ರಲ್ಲಿ ಮನೆಗಳ ನಿರ್ಮಾಣವನ್ನು ಪ್ರಾರಂಭಿಸಿ 4ಮನೆಗಳು ಪೂರ್ಣಗೊಂಡಿದ್ದು, 4 ಮನೆಗಳಿಗೆ ಅಡಿಪಾಯ ಹಾಕಲಾಗಿದ್ದು ಉಳಿದ ಮನೆಗಳನ್ನು ಕೂಡಾ ಆದಷ್ಟು ಬೇಗನೇ ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿ ಅಂತರ್ಜಲ ಮಟ್ಟ ಸುಧಾರಣೆ

623(415) ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಬರ ಸಂಭವನೀಯ ಪ್ರದೇಶ ಎಷ್ಟು

ಆ) ಗದಗ ಜಿಲ್ಲೆಯಲ್ಲಿ ಬರುವ ಸಂಭವನೀಯ ಪ್ರದೇಶ ಎಷ್ಟು

ಇ) ಗದಗ ಜಿಲ್ಲೆಯ ಈ ಪ್ರದೇಶದಲ್ಲಿನ ಅಂರ್ತಜಲ ಮಟ್ಟ ಸುಧಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು)

ಅ) ದಿನಾಂಕ: 01.6.2002ರಿಂದ 14.07.02ರ ಮಳೆ ಪ್ರಮಾಣದ ವರದಿ ಪ್ರಕಾರ, ಒಟ್ಟು 111 ತಾಲ್ಲೂಕುಗಳಲ್ಲಿ ಸಾಧಾರಣ ಮಳೆಗಿಂತ ಕಡಿಮೆ ಮಳೆಯಾಗಿದೆ. ಮುಂದಿನ ವಾರದಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆ ಇರುವುದರಿಂದ ಈ ಹಂತದಲ್ಲಿ ಬರ ಸಂಭವನೀಯ ಪ್ರದೇಶಗಳನ್ನು ನಿಖರವಾಗಿ ಗುರುತಿಸುವುದು ಕಷ್ಟ.

ಆ) ಗದಗ ಜಿಲ್ಲೆಯ 4 ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಾಗಿದ್ದು, ಒಂದು ತಾಲ್ಲೂಕಿನಲ್ಲಿ ಮಾತ್ರ ಸಾಧಾರಣಕ್ಕಿಂತ ಕಡಿಮೆ ಮಳೆಯಾಗಿದೆ.

ಇ) ರಾಜ್ಯದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಅಂತರ್ಜಲವನ್ನು ಯಥೇಚ್ಚವಾಗಿ ಬಳಕೆ ಮಾಡಿರುವುದರಿಂದ ಜಲಮಟ್ಟವು ಕುಸಿಯುತ್ತಿರುವುದನ್ನು ಅರಿತು, ಅಂತಹ ತಾಲ್ಲೂಕುಗಳನ್ನು ಅಂರ್ತಜಲದ ಬಳಕೆ ಆಧಾರದ ಮೇಲೆ 'ಕಪ್ಪು ಮತ್ತು ಭೂದು' ಪ್ರದೇಶಗಳೆಂದು ವರ್ಗೀಕರಣ ಮಾಡಿರುವ ಪ್ರದೇಶಗಳಲ್ಲಿ ಮಾತ್ರ ಅಂತರ್ಜಲವನ್ನು ವೃದ್ಧಿಗೊಳಿಸುವ ಸಲುವಾಗಿ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಗದಗ ಜಿಲ್ಲೆಯಲ್ಲಿನ ಅಂತರ್ಜಲ ಬಳಕೆ ಶೇ 50ಕ್ಕಿಂತ ಕಡಿಮೆ ಇದ್ದು ಸುರಕ್ಷಿತ ಸ್ಥಿತಿಯಲ್ಲಿರುವ ಕಾರಣ, ಆ ಜಿಲ್ಲೆಯಲ್ಲಿ ಇದುವರೆಗೆ ಯಾವುದೇ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ.

ಗದಗ್ ತಾಲ್ಲೂಕಿನಲ್ಲಿ ವಸತಿ ಶಾಲೆಗಳ ಸ್ಥಾಪನೆ

624(416) ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ವರ್ಗದವರಿಗೆ ವಸತಿ ಶಾಲೆಗಳನ್ನು ಸ್ಥಾಪಿಸುವ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರ ಇದೇ ಶೈಕ್ಷಣಿಕ ವರ್ಷದಲ್ಲಿ ವಸತಿ ಶಾಲೆಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಆಯವ್ಯಯದ ಕೊರತೆಯ ಕಾರಣ ಈ ಪ್ರಸ್ತಾವನೆಯನ್ನು ಪರಿಗಣಿಸಿರುವುದಿಲ್ಲ.

ಪರಿಶಿಷ್ಟ ಜಾತಿ/ಪಂಗಡ/ಹಿಂದುಳಿದ ವರ್ಗದವರಿಗೆ ನೀರಾವರಿ ಸೌಲಭ್ಯ ಒದಗಿಸಿದ ವಿವರ

625(1117) ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರಿಗೆ ವಿವಿಧ ಯೋಜನೆಗಳಡಿಯಲ್ಲಿ ನೀಡಿದ ನೀರಾವರಿ ಸೌಲಭ್ಯಗಳಾವುವು; (ವರ್ಷಾವಾರು, ಜಾತಿವಾರು ಮಾಹಿತಿ ನೀಡುವುದು)

ಆ) ಈ ರೀತಿಯ ನೀರಾವರಿ ಸೌಲಭ್ಯದಿಂದ ಆ ಕುಟುಂಬಗಳಿಗಾದ ವಾರ್ಷಿಕ ಆರ್ಥಿಕ ಲಾಭವೆಷ್ಟು;

ಇ) ಗದಗ ಜಿಲ್ಲೆಯಲ್ಲಿ ಈ ಸೌಲಭ್ಯ ಪಡೆದ ಕುಟುಂಬಗಳ ವಿವರ ತಾಲ್ಲೂಕುವಾರು, ಜಾತಿವಾರು ಮಾಹಿತಿ ನೀಡುವುದು;

ಈ) ಇದರಿಂದ ನೀರಾವರಿ ಪ್ರದೇಶದ ಹೆಚ್ಚಳವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

ಉ) ಈ ಸೌಲಭ್ಯ ಪಡೆದ ಕುಟುಂಬಗಳ ವಾರ್ಷಿಕ ಉತ್ಪನ್ನದಲ್ಲಿ ಆದ ಹೆಚ್ಚಳವೆಷ್ಟು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಒದಗಿಸಲಾಗಿರುವ ನೀರಾವರಿ ಸೌಲಭ್ಯಗಳ ವಿವರಗಳು ಕೆಳಕಂಡಂತಿವೆ:-

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೆಳಕಂಡ ನೀರಾವರಿ ಸೌಲಭ್ಯಗಳನ್ನು ಒದಗಿಸಿದೆ.

ವರ್ಷ	ಯೋಜನೆಯ ಹೆಸರು					
	ವೈ.ನೀ.ಕೊ.ಬಾ.ಯೋ.		ಗಂ.ಕ.ಯೋ.		ಏ.ನೀ.ಯೋ	
	ಪ.ಜಾ.	ಪ.ವರ್ಗ	ಪ.ಜಾ.	ಪ.ವರ್ಗ	ಪ.ಜಾ.	ಪ.ವರ್ಗ
1999-2000	17	7	176	43	14	03
2000-2001	697	243	521	163	18	05
2001-2002	1672	418	245	110	19	12
ಒಟ್ಟು	2386	668	942	316	51	20